ಸಲ ಅಣ್ಣ ಹೋಗುವಾಗ ಮೆಲ್ಲನೆ ಹೇಳಿದ್ದ, 'ನೀನೇನು ಬೇಜಾರು ಮಾಡ್ಕೋಬೇಡ, ನಾನು ಬಾಬಾ ಸೇರಿ ವಾಚು, ಸೈಕಲ್ ತಂದುಕೊಡೋಕೆ ಪ್ರಯತ್ನಿಸ್ತೀವಿ'.

ಅಣ್ಣನಿಗೆ ಚೆನ್ನಾಗಿ ಬೈದಳು ಅವಳು. 'ಬೇಡ ಬೇಡ. ನೀವು ಕಷ್ಟಪಡಬೇಕಾಗಿಲ್ಲ. ಬಾಬಾ ಅಂತೂ ಮೋಸಗಾರ, ಸುಳ್ಳುಗಾರ ಆಗೋಗಿದಾನೆ, ಮತ್ತೇಕೆ ವಾಚು ಸೈಕಲ್? ನಾನು? ನಾನಂತೂ ಹಸು ಆಗೋಗಿದಿನಿ. ಅವರು ನನಗೆ ಹುಲ್ಲು ತಿನ್ನೋಕೆ ಹೇಳ್ತಾರೆ.'

ಮೊತಿಜಾನ್ 'ಹ್ಹ ಹ್ಹ ಹ್ಹಿ ಹ್ಹಿ' ಅಂತ ಜೋರಾಗಿ ನಕ್ಕಳು. ಅವಳ ನಗು ಇಡೀ ಮನೆ ತುಂಬಿತು. ಈ ಮನೆಗೆ ಕಾಲಿಟ್ಟ ನಂತರ ಮೊದಲ ಬಾರಿಗೆ ಅವಳು ಕಟ್ಟೆಯೊಡೆದು ನಕ್ಕಳು. ಅವಳಣ್ಣ ಪೆದ್ದನಂತೆ ನೋಡ್ತಾಯಿದ್ದ.

ಹೀಗೆ ಅಸಭ್ಯವಾಗಿ ನಕ್ಕದ್ದಕ್ಕೆ ಚೆನ್ನಾಗಿ ಬೈದಳು ಗುಲ್ನೂರ್. ಇದೇ ಮೊದಲನೆ ಸಲ ಅತ್ತೆಯನ್ನ ನಿರ್ಲಕ್ಷ್ಯ ಮಾಡಿ ನಗ್ತಾನೆ ಇದ್ಲು ಮೊತಿಜಾನ್. ಅಣ್ಣ ಸದ್ದಿಲ್ಲದೆ ಹೊರಟ್ಹೋದ. ದುಃಖ ಅವಳ ಹೃದಯವನ್ನು ಇರಿಯಿತು. ಸದ್ದು ಮಾಡದೆ ಎದ್ದು ಕೊಟ್ಟಿಗೆಗೆ ಹೋದಳು. ಕೊಟ್ಟಿಗೆ ಕಸ ಗುಡಿಸಿ, ಬೆರಣಿ ತಟ್ಟೋವಷ್ಟರಲ್ಲಿ ಮಧ್ಯಾಹ್ನ ಉರುಳೋಯ್ತು. ಬಿಸಿಲು ಇಳಿತಾಯಿತ್ತು. ಆವತ್ತಿಂದ ಎಲ್ಲರನ್ನು ಉಪೇಕ್ಷಿಸುವ ಶಕ್ತಿ ಬೆಳೆಸಿಕೊಳ್ಳತೊಡಗಿದಳು ಮೊತಿಜಾನ್.

ಆ ದಿನ ಬಹಳ ಹೊತ್ತಾಗಿ ಹೋಗಿತ್ತು. ಭಯಂಕರ ಹೊಟ್ಟೆ ಹಸಿತಾಯಿದ್ದಿದ್ರಿಂದ ಊಟ ಮಾಡೋಕೆ ಅಡುಗೆ ಮನೆಗೆ ಹೋದಳು ಮೊತಿಜಾನ್. ಅಡುಗೆಮನೆಗೆ ಕಾಲಿಡದಂತೆ ಅತ್ತೆ ತಡೆದಳು. ಅವಳಿಗೆ ಗೊತ್ತಾಯ್ತು, ಅತ್ತೆ ಮಧ್ಯಾಹ್ನದ ನಿದ್ದೆನೂ ಮಾಡದೆ ಅಡುಗೆಮನೆ ಕಾಯ್ತಾಯಿದಾಳೆ ಅಂತ. ಆ ದಿನ ಅವಳು ಅತ್ತೆಯನ್ನ ಉಪೇಕ್ಷೆ ಮಾಡಿ ನಕ್ಕಿದ್ದಕ್ಕೆ ಶಿಕ್ಷೆ ಕೊಡ್ತಾಯಿದಾಳೆ. ಅಡುಗೆಮನೆಗೆ ಹೋಗದಂತೆ ತಡೆದಾಗ ಬಹಳ ಶಾಂತಳಾಗಿ ಹೇಳಿದಳು, 'ನಾನು ಊಟ ಮಾಡಬೇಕು, ಹೊಟ್ಟೆ ಹಸಿತಾಯಿದೆ.'

'ಊಟ ಇಲ್ಲ.'

'ಯಾಕೆ?' ಕಿರುಚಿದಳು ಮೊತಿಜಾನ್.

'ಊಟ ಹಾಕಲ್ಲ, ಹುಲ್ಲು ಹಾಕ್ತಿನಿ.'

'ಈ ಮನೆಲೀ ಕೆಲಸ ಮಾಡೋಳು ನಾನು. ಸುಮ್ನೆ ಕೂತ್ಕೊಂಡು ಉಣ್ಣಲ್ಲ. ಕೆಲಸ ಮಾಡ್ತಿನಿ, ಉಣ್ತೆನಿ. ಕೆಲಸ ಮಾಡೋರಿಗೆ ಜನ ಉಣ್ಣೋಕೆ ಕೊಡಲ್ವಾ? ನನಗೆ ಊಟ ಬೇಕು.'

ಮೊತಿಜಾನ್ ಅತ್ತೆಯನ್ನ ಬಳಸ್ಕೊಂಡು ಅಡುಗೆ ಮನೆಗೆ ನುಗ್ಗಿದಳು. ಎಲ್ಲಿ ಹುಡುಕಿದರೂ ಅನ್ನ ಸಿಗಲಿಲ್ಲ. ಅಲ್ಲೇ ನೆಲಿನ ಮೇಲೆ ಒಂದು ಬೋಸಿ ತುಂಬಾ ಅನ್ನವನ್ನ ಮುಚ್ಚಿಟ್ಟಿತ್ತು. ಅದಕ್ಕೆ ಕೈ ಹಾಕಿದಾಗ ಅತ್ತೆ ಓಡಿಬಂದಳು.

'ಕೈ ಹಾಕಬೇಡ, ಹೇಳ್ತಾಯಿದಿನಿ! ಅದು ಅಬೂಲ್ ಊಟ.'

ಮೊತಿಜಾನ್ ಜೋರಾಗಿ ಗಹಗಹಿಸಿ ನಗುತ್ತಾ ಅನ್ನ ತೆಗೆದುಕೊಂಡಳು. ಆಮೇಲೆ ಅನ್ನವನ್ನ ಅಗಿತಾ ಅಗಿತಾ ಅಂದ್ಲು, 'ಅವನು ಸೂಳೆಮನೆಲಿ ಉಣ್ತಾನೆ, ನೀನ್ಯಾಕೆ ಚಿಂತೆ ಮಾಡ್ತೀಯಾ?'

'ಏನಂದೆ? ನಿಂಗೆ ಅಷ್ಟೊಂದು ಧೈರ್ಯ?'

ಮೊತಿಜಾನ್ ಏನೂ ಜವಾಬು ಕೊಡಲಿಲ್ಲ. ಊಟವನ್ನ ಭದ್ರವಾಗಿ ಎದೆಗವಚಿ ಹಿಡಿದು ತಿನ್ನತೊಡಗಿದಳು. ಕೂತ್ಕೊಂಡು ತಿಂದ್ರೆ ಅತ್ತೆ ತಟ್ಟೇನ ಕಿತ್ಕೊತಾಳೆ. ಅಬೂಲ್‌ಗೆ ಅಂತ ಒಂದು ದೊಡ್ಡ ಮೀನಿನ ತುಂಡು ಇಟ್ಟಿತ್ತು. ಅದು ಇವತ್ತು ಅವಳ ಹೊಟ್ಟೆಗೆ. ಎಂಥಾ ಅದೃಷ್ಟ! ಅಥವಾ ಅವಳ ಹಕ್ಕು? ಮೊತಿಜಾನಳಿಗೆ ಗೊತ್ತಾಯ್ತು, ಅತ್ತೆ ತನ್ನನ್ನೇ ಅವಾಕ್ಕಾಗಿ ನೋಡ್ತಾಯಿದಾಳೆ ಅಂತ. ಗುಲ್ನೂರ್ ರೀತಿಯ ಹೆಣ್ಣಿಗೆ ಈ ಸೋಲನ್ನ ಯೋಚನೆ ಮಾಡೋಕೆ ಸಾಧ್ಯವಿಲ್ಲ. ಮೊತಿಜಾನಳ ಎದೆಯೊಳಗೆ